## ಕರ್ನಾಟಕ ಲೋಕಾಯುಕ್ತ

ನಂ.ಉಪಲೋಕ್–1/ಡಿ.ಇ/40/2017//ಎಆರ್ಇ–10.

ಡಾ:ಬಿ.ಆರ್.ಅಂಬೇಡ್ಕರ್ ವೀದಿ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು–560001,
ದಿನಾಂಕ: 22/03/2022.

## ವಿಚಾರಣಾ ವರದಿ

ಉಪಸ್ಥಿತರು: ಜಿ. ನಂಜುಂಡಯ್ಯ, ಅಪರ ನಿಬಂಧಕರು ವಿಚಾರಣೆಗಳು–10,
ಕರ್ನಾಟಕ ಲೋಕಾಯುಕ್ತ, ಬೆಂಗಳೂರು.

**ವಿಷಯ: ಆಪಾದಿತ ಸರ್ಕಾರಿ ನೌಕರ ಶ್ರೀ ರಂಗನಾಥ್,** ಸಹಾಯಕ ಕಾರ್ಯಪಾಲಕ ಅಭಿಯಂತರರು, ವಾರ್ಡ್ ನಂ. 141, ಚಾಮರಾಜಪೇಟೆ ಉಪ ವಿಭಾಗ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು ರವರ ವಿರುದ್ಧದ ಇಲಾಖಾ ವಿಚಾರಣೆಯ ಕುರಿತು.

**ಉಲ್ಲೇಖ: 1. ಕಂಪ್ಲೆಂಟ್/ಉಪಲೋಕ್/ಬಿಸಿಡಿ–3882/2014/ಅನಿವಿ–5 ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(3) ರನ್ವಯ ವರದಿ ದಿನಾಂಕ: 08/11/2016.**
2. ಸರ್ಕಾರದ ಆದೇಶ ಸಂಖ್ಯೆ: ನಅಇ 720 ಎಂಎನ್‌ಯು 2016 ಬೆಂಗಳೂರು, ದಿನಾಂಕ: 31/12/2016.
3. ನಾಮನಿರ್ದೇಶನ ಸಂಖ್ಯೆ.ಉಪಲೋಕ್–1/ಡಿಇ–40/2017, ಬೆಂಗಳೂರು ದಿನಾಂಕ: 11/01/2017.

* * * *

1) ಸದರಿ ವಿಚಾರಣೆಗೆ ಸಂಬಂಧಿಸಿದಂತೆ, ದೂರುದಾರರಾದ **ಶ್ರೀ. ಎಸ್.ಎಂ. ಸರ್ದಾರ್,** ನಂ. 18/ಡಿ, 6ನೇ ಅಡ್ಡ ರಸ್ತೆ, 2ನೇ ಮುಖ್ಯ ರಸ್ತೆ, ವಾಲ್ಮೀಕಿನಗರ, ವಾರ್ಡ್ ನಂ. 141, ಮೈಸೂರು ರಸ್ತೆ, ಬೆಂಗಳೂರು, ರವರು **ಶ್ರೀ ರಂಗನಾಥ್,** ಸಹಾಯಕ ಕಾರ್ಯಪಾಲಕ ಅಭಿಯಂತರರು, ವಾರ್ಡ್ ನಂ. 141, ಚಾಮರಾಜಪೇಟೆ ಉಪ ವಿಭಾಗ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು ರವರ ವಿರುದ್ಧ ದೂರು ಸಲ್ಲಿಸಿ, ಸ್ವತ್ತಿನ ಸಂಖ್ಯೆ 22, 1ನೇ ಮೈನ್, 10ನೇ ರಸ್ತೆ, ಇಲ್ಲಿ ಅನಧಿಕೃತ ಕಟ್ಟಡ ನಿರ್ಮಿಸಲು ಅನುವು

ಮಾಡಿರುವುದಾಗಿ ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ ಕಾಯ್ದೆಯ ಸೆಕ್ಷನ್ 321(1) ಮತ್ತು (2) ರಡಿ ನೋಟಿಸ್ ನೀಡಿದ್ದರೂ ಸಹ ಆಪಾದಿತ ಸರ್ಕಾರಿ ನೌಕರರು ಯಾವುದೇ ಕ್ರಮ ತೆಗೆದುಕೊಂಡಿರುವುದಿಲ್ಲ ಎಂದು ದೂರು ಸಲ್ಲಿಸಿದ್ದು, ಸದರಿ ದೂರಿನ ಮೇರೆಗೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ಕಲಂ 9 ರಡಿಯಲ್ಲಿ ವಿಚಾರಣೆಗೆ ತೆಗೆದುಕೊಂಡು ತನಿಖೆ ಕೈಗೊಂಡಿರುತ್ತಾರೆ.

2) ಸದರಿ ದೂರಿಗೆ ಸಂಬಂಧಿಸಿದಂತೆ ಆಪಾದಿತ ಸರ್ಕಾರಿ ನೌಕರ **ಶ್ರೀ ರಂಗನಾಥ್**, ಸಹಾಯಕ ಕಾರ್ಯಪಾಲಕ ಅಭಿಯಂತರರು, ವಾರ್ಡ್ ನಂ. 141, ಚಾಮರಾಜಪೇಟೆ ಉಪ ವಿಭಾಗ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರುರವರು ಸದರಿ ದೂರಿಗೆ ಸಂಬಂಧಿಸಿದಂತೆ ಆಕ್ಷೇಪಣೆಯನ್ನು ಮತ್ತು ಸಂಬಂಧಪಟ್ಟ ದಾಖಲಾತಿಗಳನ್ನು ಪರಿಶೀಲಿಸಲಾಗಿ, ಆ.ಸ.ನೌ ರವರು ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮ, 1966 ಕಲಂ 3(1) ರಡಿಯಲ್ಲಿ ದುರ್ನಡತೆ ಎಸಗಿರುವುದು ಮೇಲ್ನೋಟಕ್ಕೆ ಕಂಡು ಬಂದ ಕಾರಣ, ಕರ್ನಾಟಕ ಲೋಕಾಯುಕ್ತ ಅಧಿನಿಯಮದ ಕಲಂ 12(3) ಅಡಿಯಲ್ಲಿ, ಉಲ್ಲೇಖ(1)ರಲ್ಲಿ ಕಾಣಿಸಿದಂತೆ, ವರದಿ ಸಲ್ಲಿಸಿದ್ದು, ಸದರಿ ವರದಿ ಅನ್ವಯ ಕರ್ನಾಟಕ ಸರ್ಕಾರವು ಆದೇಶ ದಿನಾಂಕ 31/12/2016 ರಂದು ಮಾನ್ಯ ಉಪಲೋಕಾಯುಕ್ತ-1 ರವರಿಗೆ ವಿಚಾರಣೆ ಮಾಡಿ ವರದಿ ಸಲ್ಲಿಸುವಂತೆ, ನಾಮ ನಿರ್ದೇಶನವನ್ನು ನೀಡಿದ್ದು, ಅದರಂತೆ ಮಾನ್ಯ ಉಪಲೋಕಾಯುಕ್ತ-1 ರವರು ದಿನಾಂಕ 11/01/2017 ರಂದು ಅಪರ ನಿಬಂಧಕರು, ವಿಚಾರಣೆಗಳ-10 ರವರಿಗೆ ವಿಚಾರಣೆ ಮಾಡಿ ವರದಿಯನ್ನು ಸಲ್ಲಿಸುವಂತೆ ನಾಮನಿರ್ದೇಶನ ಮಾಡಿರುತ್ತಾರೆ.

3) ನಾಮ ನಿರ್ದೇಶನದ ಆದೇಶದಂತೆ, ಆ.ಸ.ನೌ ರವರ ವಿರುದ್ಧ ದೋಷಾರೋಪಣೆ (Article of charges) ಅನ್ನು ಅಪರ ನಿಬಂಧಕರು, ವಿಚಾರಣೆಗಳು-10 ರವರು ರಚಿಸಿದ್ದು, ಸದರಿ ದೋಷಾರೋಪಣೆ ಅನುಬಂಧ-1 ಮತ್ತು

ಅನುಬಂಧ-2 ರೊಂದಿಗೆ ದುರ್ನಡತೆ ಮತ್ತು ಕರ್ತವ್ಯ ಲೋಪಕ್ಕೆ ಸಂಬಂಧಪಟ್ಟಂತೆ, ವಿವರಗಳುಳ್ಳ ಆರೋಪವನ್ನು **ಆಪಾದಿತ ಸರ್ಕಾರಿ ನೌಕರ ರವರಿಗೆ** ದಿನಾಂಕ 08/11/2016 ರಂದು ಈ ಕೆಳಕಂಡಂತೆ ಕಳುಹಿಸಲಾಗಿರುತ್ತದೆ.

**ANNEXURE NO. 1**
**CHARGE**

That, you **DGO – Ranganath**, BBMP, Chamrajpet Sub-division, Bengaluru though the provisional order was issued on 28.11.2013, no action has been taken thereafter till 6.1.2014 on which confirmation order was issued by you and thereby you have allowed time to the owner to approach Court without taking action on confirmation order dtd.6.1.2014. You only submitted file to Executive Engineer on 23.6.2014 for issuing order u/s 462 of KMC Act in respect of unauthorized construction in property no.22, 1st main, 10th road in your ward.

Thus you DGO, being Government /public servant has failed to maintain absolute integrity besides devotion to duty and acted in a manner unbecoming of Government servant and thus committed misconduct as enumerated U/R 3(1) of Karnataka Civil Service (Conduct) Rules 1966.

**ANNEXURE NO. II**
**STATEMENT OF IMPUTATIONS OF MISCONDUCT**

3) According to the Complainant ; unauthorized construction is allowed in Property No.22, 1st Main, 10th Road and no action is taken even after issuing notice u/s 321(1) and (2) of KMC Act by the DGO.

4) DGO has submitted comments stating that, complainant had given complaint dtd.3.12.2013 before Joint Director of Town Planning. Provisional Order dtd.28.11.2013 has been issued to the owner. Since the owner did not clear unauthorized construction Confirmation Order has been issued on 6.1.2014. Order under Section 462 of KMC Act has been passed on 23.6.2014 to demolish the building. Estimate for demolishing the building has been obtained on 18.9.2014. Letter was written to Chamarajapet police on 29.9.2014 to give protection for demolition. In the meanwhile owner has obtained status quo order and it has been communicated on 29.10.2014. Suit filed by the owner has been dismissed on 4.12.2014 and action will be taken now to demolish the building.

5) Records collected during investigation disclose the following;

i) Provisional Order dtd.28.11.2013 has been issued by Assistant Executive Engineer to the owner about unauthorized construction to give explanation within 7 days.

ii) Confirmation order has been issued on 6.1.2014 by Assistant Executive Engineer.

iii) Order under section 462 of KMC Act hjas been passed by Executive Engineer on 23.6.2014.

iv) O.S.No.7649/2014 has been filed by the owner on 10.10.2014 as seen from website.

v) Though Provisional order has been issued on 28.11.2013, no action has been taken thereafter till 6.1.2014 on which date confirmation order has been issued by the DGO and thereby DGO has allowed time to the owner to approach court without taking action on confirmation order dated.6.1.2014. He has submitted file to Executive Engineer only on 23.6.2014 for issuing order under section 462 of KMC Act.

vi) The delay on the part of DGO in taking action after issuing provisional order and thereby allowing the owner to approach court amount to dereliction of duty.

6) In view of the above, reply of DGO is not acceptable to drop the proceedings against him.

7) Since the said facts and materials on record prima facie show that DGO Sri Ranganath, Assistant Executive Engineer, BBMP, Ward No.141, Chamarajapet Sub-Division, Bangalore has committed misconduct under Rule 3(1) of KCS (Conduct) Rules, 1966 recommendation is made under section 12(3) of Karnataka Lokayukta Act, 1984 to the Competent Authority to initiate disciplinary proceedings against DGO Sri Ranganath, Assistant Executive Engineer, BBMP, Ward No.141, Chamarajapet Sub-Division, Bangalore and to entrust the inquiry to this Authority under Rule 14-A of Karnataka Civil Service (Classifications, Control and Appeal) Rules, 1957. In turn Competent Authority initiated disciplinary proceedings against DGO and entrusted the enquiry to this Institution vide reference no.2 and Hon'ble Upalokayukta nominated this enquiry Authority, to conduct enquiry and report vide reference No. 3. **Hence, the above said charge.**

4) ಈ ಮೇಲ್ಕಂಡ ದೋಷಾರೋಪಣೆ (ಆರ್ಟಿಕಲ್ ಆಫ್ ಚಾರ್ಜ್) ಆ.ಸ.ನೌ ರವರಿಗೆ ಕಳುಹಿಸಿದ್ದು, ಅದು ಜಾರಿಯಾದ ನಂತರ ಆ.ಸ.ನೌ ರವರು ದಿನಾಂಕ 04/03/2017 ರಂದು ಈ ಪ್ರಾಧಿಕಾರದ ಮುಂದೆ ಹಾಜರಾಗಿದ್ದು, ಅವರ ಪ್ರಥಮ ಮೌಖಿಕ ಹೇಳಿಕೆಯನ್ನು ನಿಯಮ-11 (9) ಕೆ.ಸಿ.ಎಸ್. ಸಿಸಿಎ ರೂಲ್ಸ್ 1957ರ ಅಡಿಯಲ್ಲಿ ದಾಖಲಿಸಿಕೊಳ್ಳಲಾಗಿರುತ್ತದೆ. ಆ.ಸ.ನೌ ರವರು ತಪ್ಪೊಪ್ಪಿಕೊಳ್ಳದೆ ಆರೋಪಗಳ ವಿಚಾರಣೆಯನ್ನು ಬಯಸಿರುತ್ತಾರೆ.

5) ಆ.ಸ.ನೌ ರವರಿಗೆ ದಾಖಲೆಗಳ ಪರಿಶೀಲನೆ ಮತ್ತು ಶೋಧನೆಗಾಗಿ ಅವಕಾಶ ಕಲ್ಪಿಸಲಾಗಿರುತ್ತದೆ.

6) ಆ.ಸ.ನೌ ರವರು ತಮ್ಮ ಲಿಖಿತ ರಕ್ಷಣಾ ಹೇಳಿಕೆಯನ್ನು ದಿನಾಂಕ 12/01/2018 ರಂದು ಸಲ್ಲಿಸಿ, ದೋಷಾರೋಪಣೆಯಲ್ಲಿ ಮಾಡಿರುವ ಆರೋಪಗಳನ್ನು ಸಂಪೂರ್ಣವಾಗಿ ಅಲ್ಲಗಳೆದಿರುತ್ತಾರೆ,

7) ಈ ವಿಚಾರಣೆಯಲ್ಲಿ, ಆ.ಸ.ನೌ ರವರ ವಿರುದ್ಧ ಆರೋಪಿಸಲಾದ ಆರೋಪಕ್ಕೆ ಸಂಬಂಧಿಸಿದಂತೆ, ಮಂಡನಾಧಿಕಾರಿಗಳು ತಮ್ಮ ಪರವಾಗಿ **ದೂರುದಾರರಾದ ಶ್ರೀ ಸರ್ವರ್ ಬೇಗ್** ರವರನ್ನು ಪಿ.ಡಬ್ಲ್ಯೂ.1 ಎಂದು ಸಾಕ್ಷ್ಯ ನುಡಿಸಿಕೊಂಡು **ನಿ.ಪಿ.-1 ರಿಂದ 7** ರವರೆಗಿನ ದಾಖಲೆಗಳನ್ನು ಶಿಸ್ತು ಪ್ರಾಧಿಕಾರದ ಪರವಾಗಿ ಗುರುತಿಸಿಕೊಂಡಿರುತ್ತಾರೆ. ತದನಂತರ, ಆ.ಸ.ನೌ-1 ರವರ ದ್ವಿತೀಯ ಮೌಖಿಕ ಹೇಳಿಕೆಯನ್ನು ದಿನಾಂಕ 20/12/2017 ರಂದು ಪಡೆದುಕೊಳ್ಳಲಾಗಿರುತ್ತದೆ.

8) ಆಪಾದಿತ ಸರ್ಕಾರಿ ನೌಕರ **ಶ್ರೀ ರಂಗನಾಥ್,** ಸಹಾಯಕ ಕಾರ್ಯಪಾಲಕ ಅಭಿಯಂತರರು, ವಾರ್ಡ್ ನಂ. 141, ಚಾಮರಾಜಪೇಟೆ ಉಪ ವಿಭಾಗ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು ರವರು, ತಮ್ಮ ಪರವಾಗಿ ಯಾವುದೇ

ಸಾಕ್ಷ್ಯವನ್ನಾಗಲೀ ವಿಚಾರಣೆಯನ್ನಾಗಲೀ ಮಾಡಿಕೊಂಡಿರುವುದಿಲ್ಲ ಮತ್ತು ದಾಖಲಾತಿಗಳನ್ನು ಸಹ ಗುರುತಿಸಿಕೊಂಡಿರುವುದಿಲ್ಲ.

9) ಉಭಯ ಪಕ್ಷದವರ ಪರವಾಗಿ ಮಂಡನಾಧಿಕಾರಿಗಳ ವಾದ ವಿವಾದವನ್ನು ಪರಿಶೀಲಿಸಲಾಯಿತು.

10) ಈ ಕೆಳಕಂಡ ಅಂಶವು ನನ್ನ ನಿರ್ಣಯಕ್ಕೆ ಉದ್ಭವಿಸಿರುತ್ತದೆ.

**ಅಂಶ–1:** ವಿಚಾರಣಾ ಪ್ರಾಧಿಕಾರವು ಆ.ಸ.ನೌ ರವರ ಮೇಲೆ ಆಪಾದಿಸಲಾದ ಆರೋಪಗಳನ್ನು ರುಜುವಾತು ಪಡಿಸಿದೆಯೇ?

**ಅಂಶ–2:** ಆದೇಶವೇನು?

11) ವಾದ ವಿವಾದದ ನಂತರ ಕಡತವನ್ನು ಪರಿಶೀಲಿಸಲಾಯಿತು ಮತ್ತು ಲಭ್ಯವಿರುವ ಮೌಖಿಕ ಮತ್ತು ದಸ್ತಾವೇಜು ಸಾಕ್ಷ್ಯವನ್ನು ಪರಿಶೀಲಿಸಲಾಯಿತು.

12) ಮೇಲ್ಕಂಡ ಪ್ರಶ್ನೆಗಳಿಗೆ ಕೆಳಗೆ ಚರ್ಚಿಸಿರುವ ಕಾರಣಗಳಿಂದ ಉತ್ತರವು ಈ ಕೆಳಕಂಡಂತಿದೆ.

**ಅಂಶ 1: ಸಕರಾತ್ಮಕವಾಗಿ**

**ಅಂಶ 2: ಅಂತಿಮ ಆದೇಶದಂತೆ**

**ಕಾರಣಗಳು:**

13) ಈ ವಿಚಾರಣೆಯಲ್ಲಿ, ಆ.ಸ.ನೌ ರವರ ವಿರುದ್ಧದ ಆರೋಪಿಸಲಾದ ಆರೋಪಕ್ಕೆ ಸಂಬಂಧಿಸಿದಂತೆ, ಮಂಡನಾಧಿಕಾರಿಗಳು ತಮ್ಮ ಪರವಾಗಿ **ದೂರುದಾರರಾದ ಶ್ರೀ ಸರ್ವರ್ ಬೇಗ್** ರವರನ್ನು ಪಿ.ಡಬ್ಲ್ಯೂ.1 ಎಂದು ಸಾಕ್ಷ್ಯ ನುಡಿಸಿಕೊಂಡು **ನಿ.ಪಿ.–1 ರಿಂದ 7** ರವರೆಗಿನ ದಾಖಲೆಗಳನ್ನು ಶಿಸ್ತು ಪ್ರಾಧಿಕಾರದ ಪರವಾಗಿ ಗುರುತಿಸಿಕೊಂಡಿರುತ್ತಾರೆ.

14) ದೂರುದಾರ ಪಿ.ಡಬ್ಲ್ಯೂ–1 **ಶ್ರೀ ಸರ್ವರ್ ಬೇಗ್** ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ, ಆಪಾದಿತ ಸರ್ಕಾರಿ ನೌಕರರು ಚಾಮರಾಜಪೇಟೆ ಉಪ ವಿಭಾಗದಲ್ಲಿ ಸಹಾಯಕ ಕಾರ್ಯಪಾಲಕ ಅಭಿಯಂತರರಾಗಿ ಕರ್ತವ್ಯ ನಿರ್ವಹಿಸುತ್ತಿದ್ದರು, ಸ್ವತ್ತಿನ ಸಂಖ್ಯೆ 22, 1ನೇ ಮುಖ್ಯ ರಸ್ತೆ, ವಾಲ್ಮೀಕಿನಗರ ಈ ಸ್ವತ್ತು ಅಸ್ಲಂ ಪಾಶ್ ರವರಿಗೆ ಸೇರಿದ್ದು, ಸದರಿಯವರು 2013–14ನೇ ಸಾಲಿನಲ್ಲಿ ನಕ್ಷೆ ಮಂಜೂರಾಗದೆ, ಸೆಟ್ ಬ್ಯಾಕ್‌ನ್ನು ಬಿಡದೆ, ಬಿಬಿಎಂಪಿಯ ಆಸ್ತಿಯನ್ನು ಒತ್ತುವರಿ ಮಾಡಿಕೊಂಡು ಕಟ್ಟಡ ಕಟ್ಟಲು ಶುರು ಮಾಡಿರುತ್ತಾರೆಂದು, ಆದ್ದರಿಂದ, ಸದರಿಯವರು ಆಯುಕ್ತರು, ಬೆಂಗಳೂರು ಮಹಾನಗರ ಪಾಲಿಕೆ ರವರಿಗೆ, ಕಾರ್ಯಪಾಲಕ ಅಭಿಯಂತರರು, ಸಹಾಯಕ ಕಾರ್ಯಪಾಲಕ ಅಭಿಯಂತರರು, ಬಿ.ಎಂ.ಟಿ.ಎಫ್ ರವರುಗಳಿಗೆ ಮನವಿ ಪತ್ರವನ್ನು ಸಲ್ಲಿಸಿರುವುದಾಗಿ ಹಾಗೂ ಬಿ.ಎಂ.ಟಿ.ಎಫ್ ಅಧಿಕಾರಿಗಳು ಕಟ್ಟಡ ವೀಕ್ಷಣೆ/ತನಿಖೆ ಮಾಡಿದ್ದು ಆ ಸಮಯದಲ್ಲಿ ಮೆಟ್ಟಿಲುಗಳನ್ನು ಇನ್ನೂ ಕಟ್ಟಿರಲಿಲ್ಲವೆಂದು ಸಾಕ್ಷ್ಯ ನುಡಿದಿರುತ್ತಾರೆ.

15) ದೂರುದಾರ ಪಿಡಬ್ಲ್ಯೂ–1 ರವರ ಮುಂದುವರೆದ ಮುಖ್ಯ ಸಾಕ್ಷ್ಯದಲ್ಲಿ, ಆಯುಕ್ತರು, ಬೆಂಗಳೂರು ಬೃಹತ್ ಮಹಾನಗರ ಪಾಲಿಕೆ ರವರು ಆದೇಶ ಮಾಡಿ ಸದರಿ ಕಟ್ಟಡವನ್ನು ಕೆಡವಲು ಆದೇಶ ಮಾಡಿರುತ್ತಾರೆ. ತಾನು ಸಹ ಕಟ್ಟಡ ಮಾಲಿಕರ ವಿರುದ್ಧ ಸಿವಿಲ್ ಕೇಸ್‌ನ್ನು ಹಾಗೂ ಬೆಂಗಳೂರು ಬೃಹತ್ ಮಹಾನಗರ ಪಾಲಿಕೆಯಲ್ಲಿ ದೂರನ್ನು ದಾಖಲಿಸಿರುವುದಾಗಿ, ಯಾವುದೇ ಕ್ರಮಕೈಗೊಳ್ಳದಿದ್ದ ಕಾರಣ ಲೋಕಾಯುಕ್ತಕ್ಕೆ ನಿಗದಿತ ನಮೂನೆ ಪ್ರಪತ್ರ–1 ಮತ್ತು

2 ರಲ್ಲಿ **ನಿ.ಪಿ–1 ರಿಂದ 3** ರಂತೆ ದೂರು ಸಲ್ಲಿಸಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಬೆಂಗಳೂರು ಬೃಹತ್ ಮಹಾನಗರ ಪಾಲಿಕೆಯವರು ನೀಡಿರುವ ನೋಟಿಸ್ **ನಿ.ಪಿ–4 ರಿಂದ ನಿ.ಪಿ–6** ಎಂದು ಗುರುತಿಸಲಾಗಿರುತ್ತದೆ. ಓ.ಎಸ್. ನಂ 394/2014 ರ ಪ್ರತಿಯನ್ನು ನಿ.ಪಿ–7 ಎಂದು ಗುರುತಿಸಲಾಗಿರುತ್ತದೆ.

16) ದೂರುದಾರ ಪಿಡಬ್ಲ್ಯೂ–1 ರವರ ಮುಂದುವರೆದ ಮುಖ್ಯ ಸಾಕ್ಷ್ಯದಲ್ಲಿ, ತಾನು ದೂರು ಸಲ್ಲಿಸುವ ಸಮಯದಲ್ಲಿ ನೆಲಮಹಡಿ ಮತ್ತು 1ನೇ ಮಹಡಿಯ ಮೋಲ್ಡ್ ಕೆಲಸ ಮುಗಿದಿತ್ತೆಂದು, ಈ ದೂರನ್ನು ಸಲ್ಲಿಸಿದ ನಂತರ ಅನಧಿಕೃತ ಭಾಗಗಳನ್ನು ತೆರವುಗೊಳಿಸಿದ್ದರು ಸೆಟ್ ಬ್ಯಾಕನ್ನು ಸರಿಮಾಡಲಿಲ್ಲವೆಂದು, ಕಟ್ಟಡ ಮಾಲೀಕರಿಗೆ ನೋಟಿಸ್‌ನ್ನು ಕೊಟ್ಟಿರುವುದನ್ನು ಬಿಟ್ಟರೆ ದೂರನ್ನು ಸಲ್ಲಿಸುವುದಾಗಲೀ ಅಥವಾ ಸದರಿ ಕಟ್ಟಡಕ್ಕೆ ನೀರು ಮತ್ತು ವಿದ್ಯುತ್ ಸಂಪರ್ಕವನ್ನು ಕಡಿತಗೊಳಿಸಿ ಇದರಿಂದ ಮುಂದಿನ ಕಟ್ಟಡ ಕಾಮಗಾರಿಯನ್ನು ನಿಲ್ಲಿಸದೆ ಯಾವುದೇ ಕ್ರಮವನ್ನು ಜರುಗಿಸಿರುವುದಿಲ್ಲವೆಂದು, ಆಪಾದಿತ ಸರ್ಕಾರಿ ನೌಕರರು ಇದಕ್ಕೆ ಕಾರಣಕರ್ತರೆಂದು ಸಾಕ್ಷ್ಯ ನುಡಿದಿರುತ್ತಾರೆ.

17) ಆಪಾದಿತ ಸರ್ಕಾರಿ ನೌಕರರು ದಿನಾಂಕ 04/03/2017 ರಂದು ಈ ಪ್ರಾಧಿಕಾರದ ಮುಂದೆ ಹಾಜರಾಗಿದ್ದು ಸದರಿಯವರ ಪ್ರಥಮ ಮೌಖಿಕ ಹೇಳಿಕೆ ಪಡೆದುಕೊಂಡಿದ್ದು, ನಂತರ ದಿನಾಂಕ 26/04/2017, 27/06/2017, 14/08/2017 ಹಾಗೂ 09/10/2017 ರವರೆಗೂ ಈ ವಿಚಾರಣಾ ಪ್ರಾಧಿಕಾರದ ಮುಂದೆ ಹಾಜರಾಗದ ಕಾರಣ ಪಿಡಬ್ಲ್ಯೂ–1 ದೂರುದಾರರನ್ನು ವಿಚಾರಣೆ ಮಾಡಿ ನಿ.ಪಿ–1 ರಿಂದ 7 ರವರೆಗಿನ ದಾಖಲಾತಿಗಳನ್ನು ಗುರುತು ಮಾಡಿಕೊಂಡಿದ್ದು, ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಗಿರುತ್ತದೆ ನಂತರ ದಿನಾಂಕ 20/12/2017 ರಂದು 2ನೇ ಮೌಖಿಕ ಹೇಳಿಕೆಯನ್ನು ಪಡೆದುಕೊಳ್ಳಲಾಗಿರುತ್ತದೆ. ನಂತರ ಆಪಾದಿತ ಸರ್ಕಾರಿ ನೌಕರರು **22/12/2018 ರಿಂದ ಇಲ್ಲಿಯವರೆಗೂ ಗೈರುಹಾಜರಾಗಿರುತ್ತಾರೆ.**

18) ಪಿ.ಡಬ್ಲ್ಯೂ-1 ರವರ ಸಾಕ್ಷ್ಯ ನಿ.ಪಿ-1 ರಿಂದ ನಿ.ಪಿ-7 ರ ದಾಖಲಾತಿಗಳು ಹಾಗೂ ಕಡತದಲ್ಲಿರುವ ದಾಖಲಾತಿಗಳನ್ನು ಕೂಲಂಕುಶವಾಗಿ ಪರಿಶೀಲನೆ ಮಾಡಲಾಗಿ, ದೂರುದಾರರು ತಮ್ಮ ಸಾಕ್ಷ್ಯದಲ್ಲಿ, ಆಪಾದಿತ ಸರ್ಕಾರಿ ನೌಕರರು ಚಾಮರಾಜಪೇಟೆ ಉಪ ವಿಭಾಗದಲ್ಲಿ ಸಹಾಯಕ ಕಾರ್ಯಪಾಲಕ ಅಭಿಯಂತರರಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ಸಮಯದಲ್ಲಿ, ಸ್ವತ್ತಿನ ಸಂಖ್ಯೆ 22, 1ನೇ ಮುಖ್ಯ ರಸ್ತೆ, ವಾಲ್ಮೀಕಿನಗರ, ಬೆಂಗಳೂರು ರ ಕಟ್ಟಡದ ಮಾಲೀಕರಾದ ಶ್ರೀ ಅಸ್ಲಂ ಪಾಶ್ ರವರಿಗೆ ಸೇರಿದ್ದು, ಸದರಿಯವರು 2013-14ನೇ ಸಾಲಿನಲ್ಲಿ ನಕ್ಷೆ ಮಂಜೂರಾಗದೆ, ಸೆಟ್ ಬ್ಯಾಕ್‌ನ್ನು ಬಿಡದೆ, ಬಿಬಿಎಂಪಿಯ ಆಸ್ತಿಯನ್ನು ಒತ್ತುವರಿ ಮಾಡಿಕೊಂಡು ಕಟ್ಟಡ ಕಟ್ಟಲು ಶುರು ಮಾಡಿರುತ್ತಾರೆಂದು, ಆದ್ದರಿಂದ, ದೂರುದಾರರು, ಆಯುಕ್ತರು, ಬೆಂಗಳೂರು ಮಹಾನಗರ ಪಾಲಿಕೆ ರವರಿಗೆ, ಕಾರ್ಯಪಾಲಕ ಅಭಿಯಂತರರು, ಸಹಾಯಕ ಕಾರ್ಯಪಾಲಕ ಅಭಿಯಂತರರು, ಬಿ.ಎಂ.ಟಿ.ಎಫ್ ರವರುಗಳಿಗೆ ಮನವಿ ಪತ್ರವನ್ನು ಸಲ್ಲಿಸಿರುವುದಾಗಿ ಸದರಿಯವರುಗಳು ಯಾವುದೇ ಕ್ರಮವನ್ನು ಕೈಗೊಳ್ಳದಿದ್ದರಿಂದ **ನಿ.ಪಿ-1 ರಿಂದ ನಿ.ಪಿ-3** ರಂತೆ ದೂರು ಸಲ್ಲಿಸಿದ್ದಾಗಿ ಸಾಕ್ಷ್ಯ ನುಡದಿರುವುದು ಕಂಡು ಬರುತ್ತದೆ.

19) ದೂರುದಾರರು ದೂರು ಸಲ್ಲಿಸುವ ಸಮಯದಲ್ಲಿ ನೆಲಮಹಡಿ ಮತ್ತು 1ನೇ ಮಹಡಿ ಕಟ್ಟಡದ ಮೋಲ್ಡ್ ಕೆಲಸ ಮುಗಿದಿದ್ದಾಗಿ ನುಡಿದಿರುತ್ತಾರೆ. **ನಿ.ಪಿ-4 ಮತ್ತು ನಿ.ಪಿ-5** ನ್ನು ಪರಿಶೀಲಿಸಲಾಗಿ **ಆಪಾದಿತ ಸರ್ಕಾರಿ ನೌಕರರು ದಿನಾಂಕ 28/11/2013 ರಂದು ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ ಕಾಯ್ದೆ 1976 ರ ಕಲಂ 321(1)) ಮತ್ತು 321(2) ಕಟ್ಟಡ ಮಾಲೀಕರಾದ** ಶ್ರೀ ಅಸ್ಲಂ ಪಾಷ ರವರಿಗೆ ತಾವು ನಕ್ಷೆಗೆ ಮಂಜೂರಾತಿ ಪಡೆಯದೇ ಬೈಲಾಗಳು ಹಾಗೂ ಇತರೆ ನಿಯಮಗಳನ್ನು ಉಲ್ಲಂಘಿಸಿ ಅನಧೀಕೃತವಾಗಿ ಕಟ್ಟಡವನ್ನು ನಿರ್ಮಿಸಿರುವುದು ಕಂಡು ಬಂದಿದ್ದು ನೀವು ಸಮಜಾಯಿಸಿ ಕೊಟ್ಟು ಕಟ್ಟಡವನ್ನು ಕಟ್ಟುವುದನ್ನು ನಿಲ್ಲಿಸಿ ಎಂದು ತಾತ್ಕಲಿಕ ಆದೇಶವನ್ನು ಜಾರಿ ಮಾಡಿರುವುದು ಕಂಡು ಬರುತ್ತದೆ.

20) **ನಿ.ಪಿ–6** ನ್ನು ಪರಿಶೀಲಿಸಲಾಗಿ ಕಾರ್ಯಪಾಲಕ ಅಭಿಯಂತರರು, ಚಾಮರಾಜಪೇಟೆ ವಿಭಾಗ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು ರವರು ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ ಕಾಯ್ದೆ 1976 ರ ಕಲಂ 462 ರ ಪ್ರಕಾರ ಸ್ವತ್ತಿನ ಸಂಖ್ಯೆ, 22, 10ನೇ ಅಡ್ಡರಸ್ತೆ, ವಾಲ್ಮೀಕಿನಗರದ ಮಾಲೀಕರಾದ ಶ್ರೀ ಅಸ್ಲಂ ಪಾಷ ರವರು ಮಂಜೂರಾತಿ ನಕ್ಷೆಗೆ ಮಂಜೂರಾತಿ ಪಡೆಯದೇ ಕಟ್ಟಡ ನಿರ್ಮಾಣ ಮಾಡಿರುವುದು ಕಂಡುಬಂದಿರುತ್ತದೆ. ಆದುದರಿಂದ ಸದರಿಯವರಿಗೆ ಕೆಎಂಸಿ ಕಾಯ್ದೆ ಸೆಕ್ಷನ್ 321(1) ಮತ್ತು (2) ನ್ನು ದಿನಾಂಕ 28.11.2013 ರಂದು ಜಾರಿ ಮಾಡಿದ್ದು, ಸದರಿಯವರು ಯಾವುದೇ ಸಮಜಾಯಿಷಿ ಉತ್ತರ ನೀಡಿರುವುದಿಲ್ಲ ಹಾಗೂ ಅನಧೀಕೃತ ಕಟ್ಟಡ ಭಾಗವನ್ನು ತೆರವುಗೊಳಿಸಿರುವುದಿಲ್ಲ. ಆದುದರಿಂದ ಸದರಿ ಕಟ್ಟಡದ ಮಾಲೀಕರಿಗೆ ಕೆ.ಎಂ.ಸಿ. ಕಾಯ್ದೆ 1976 ಸಕ್ಷನ್ 321(3) ನ್ನು ದಿನಾಂಕ 06.01.2014 ರಂದು ಜಾರಿ ಮಾಡಿ ಅನಧೀಕೃತವಾಗಿ ನಿರ್ಮಿಸಿರುವ ಕಟ್ಟಡದ ಭಾಗಗಳನ್ನು ತೆಗೆದು ಹಾಕುವಂತೆ ಆದೇಶಿಸಿದ್ದು, ಆದರೆ ಸದರಿ ಕಟ್ಟಡ ಮಾಲೀಕರು ಅನಧೀಕೃತವಾಗಿ ನಿರ್ಮಾಣ ಮಾಡಿರುವ ಭಾಗಗಳನ್ನು ತೆಗೆದು ಹಾಕದೇ ಇರುವುದು ಕಂಡಿದ್ದರಿಂದ, ದಿನಾಂಕ **23.06.2014** ರಂದು ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಚಾಮರಾಜಪೇಟೆ ಉಪವಿಭಾಗ (ಆಪಾದಿತ ಸರ್ಕಾರಿ ನೌಕರರಿಗೆ) ಕಟ್ಟಡದ ಅನಧಿಕೃತ ಭಾಗಗಳನ್ನು ಕೆಡವಿ ಹಾಕಲು ಆದೇಶಿಸಿರುವುದು ಕಂಡು ಬರುತ್ತದೆ.

21) **ಮೇಲ್ಕಂಡ ಅಂಶಗಳಿಂದ,** ಸ್ವತ್ತಿನ ಸಂಖ್ಯೆ 22, 10ನೇ ಅಡ್ಡ ರಸ್ತೆ, ವಾಲ್ಮೀಕಿನಗರ, ವಾರ್ಡ್ ಸಂಖ್ಯೆ 141, ಬೆಂಗಳೂರು ರ ಮಾಲೀಕರಾದ ಶ್ರೀ ಅಸ್ಲಂ ಪಾಷರವರು 2013–14ನೇ ಸಾಲಿನಲ್ಲಿ ನಕ್ಷೆ ಮಂಜೂರಾಗದೆ, ಸೆಟ್ ಬ್ಯಾಕ್‌ನ್ನು ಬಿಡದೆ, ಬಿಬಿಎಂಪಿಯ ಆಸ್ತಿಯನ್ನು ಒತ್ತುವರಿ ಮಾಡಿಕೊಂಡು ಕಟ್ಟಡ ಕಟ್ಟಲು ಶುರು ಮಾಡಿದ್ದು, ನೆಲಮಹಡಿ ಮತ್ತು 1ನೇ ಮಹಡಿ ಕಟ್ಟಡದ ಮೋಲ್ಡ್ ಕೆಲಸ ಮುಗಿದಿದ್ದು, ಈ ಬಗ್ಗೆ ದೂರುದಾರರು ಆಯುಕ್ತರು, ಬೆಂಗಳೂರು ಮಹಾನಗರ ಪಾಲಿಕೆ, ಕಾರ್ಯಪಾಲಕ ಅಭಿಯಂತರರು, ಸಹಾಯಕ ಕಾರ್ಯಪಾಲಕ ಅಭಿಯಂತರರು, ಬಿ.ಎಂ.ಟಿ.ಎಫ್ ರವರುಗಳಿಗೆ ಮನವಿ ಪತ್ರವನ್ನು ಸಲ್ಲಿಸಿದ್ದು, ಯಾವುದೇ ಕ್ರಮಕೈಗೊಂಡಿರುವುದಿಲ್ಲವೆಂದು, ಆದ್ದರಿಂದ ದಿನಾಂಕ 17/11/2014

ರಂದು ಲೋಕಾಯುಕ್ತ ಸಂಸ್ಥೆಗೆ ನಿ.ಪಿ–1 ರಿಂದ 3 ರಂತೆ ದೂರು ನೀಡಿರುವುದು ಕಂಡು ಬಂದಿರುತ್ತದೆ.

22) **ನಿ.ಪಿ–4 ಮತ್ತು ನಿ.ಪಿ–5** ನ್ನು ಪರಿಶೀಲಿಸಲಾಗಿ, ಆಪಾದಿತ ಸರ್ಕಾರಿ ನೌಕರರು ದಿನಾಂಕ 28/11/2013 ರಂದು ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ ಕಾಯ್ದೆ **1976 ರ ಕಲಂ 321(1)) ಮತ್ತು 321(2) ಕಟ್ಟಡ ಮಾಲೀಕರಾದ** ಶ್ರೀ ಅಸ್ಲಂ ಪಾಷ ರವರಿಗೆ ತಾವು ನಕ್ಷೆಗೆ ಮಂಜೂರಾತಿ ಪಡೆಯದೇ ಬೈಲಾಗಳು ಹಾಗೂ ಇತರೆ ನಿಯಮಗಳನ್ನು ಉಲ್ಲಂಘಿಸಿ ಅನಧೀಕೃತವಾಗಿ ಕಟ್ಟಡವನ್ನು ನಿರ್ಮಿಸಿರುವುದು ಕಂಡು ಬಂದಿದ್ದು ನೀವು 7 ದಿನದೊಳಗಾಗಿ ಸಮಜಾಯಿಸಿ ಕೊಟ್ಟು ಕಟ್ಟಡವನ್ನು ಕಟ್ಟುವುದನ್ನು ನಿಲ್ಲಿಸಿ ಎಂದು ತಾತ್ಕಲಿಕ ಆದೇಶವನ್ನು ಜಾರಿ ಮಾಡಿರುವುದು ಕಂಡು ಬರುತ್ತದೆ.

23) ಕಟ್ಟಡ ಮಾಲೀಕರಾದ ಶ್ರೀ ಅಸ್ಲಂ ಪಾಶ ರವರಿಗೆ ದಿನಾಂಕ 28/11/2013 ರಂದು ಕೆ.ಎಂ.ಸಿ. ಕಾಯ್ದೆ 321(1) ಮತ್ತು 321(2) ತಾತ್ಕಲಿಕ ಆದೇಶ ಜಾರಿ ಮಾಡಿ 7 ದಿನದೊಳಗಾಗಿ ಸಮಜಾಯಿಷಿಯನ್ನು ನೀಡುವಂತೆ ಸೂಚಿಸಿದ್ದರು, ಅವರು ಯಾವುದೇ ಅನಧಿಕೃತ ಭಾಗಗಳನ್ನು ತೆರವುಗೊಳಿಸದೆ ಯಾವುದೇ ಸಮಜಾಯಿಷಿಯನ್ನು 7 ದಿನದೊಳಗಾಗಿ ನೀಡದೆ ಇದ್ದರೂ, ಆಪಾದಿತ ಸರ್ಕಾರಿ ನೌಕರರು ಯಾವುದೇ ಕಾನೂನು ಕ್ರಮಕೈಗೊಳ್ಳದೆ ಕೆ.ಎಂ.ಸಿ. ಕಾಯ್ದೆ 323(3) ಸ್ಥಿರ ಆದೇಶ ಮಾಡದೆ ದಿನಾಂಕ 01.06.2014 ವರೆಗೆ ಹಾಗೂ ಕೆ.ಎಂ.ಸಿ. ಕಾಯ್ದೆ 1976 ಕಲಂ 462 ರ ಪ್ರಕಾರ ಸ್ಥಿರ ಆದೇಶ ಹೊರಡಿಸಲು ಕಡತವನ್ನು ಕಾರ್ಯಪಾಲಕ ಅಭಿಯಂತರರು, ಚಾಮರಾಜಪೇಟೆ ಉಪ ವಿಭಾಗ, ಬೆಂಗಳೂರು ರವರಿಗೆ ಕಳುಹಿಸಬೇಕಾಗಿದ್ದು, ಆದರೆ ಆಪಾದಿತ ಸರ್ಕಾರಿ ನೌಕರರು ದಿನಾಂಕ 23.06.2014 ರವರಿಗೆ ಕಡತವನ್ನು ಮುಂದಿನ ಕ್ರಮಕ್ಕಾಗಿ ಕಳುಹಿಸದೆ ಕಟ್ಟಡ ಮಾಲೀಕ ಶ್ರೀ ಅಸ್ಲಂ ಪಾಶರವರು ನ್ಯಾಯಾಲಯ ಮೋರೆ ಹೋಗಲು ಅನುವು ಮಾಡಿಕೊಟ್ಟು ಕರ್ತವ್ಯಲೋಪವೆಸಗಿರುವುದು ವಿಚಾರಣೆಯಿಂದ **ಶಿಸ್ತುಪ್ರಾಧಿಕಾರಿಗಳು ಸಾಬೀತುಪಡಿಸುವಲ್ಲಿ ಸಫಲರಾಗಿರುತ್ತಾರೆ.**

ಅಂಶ–2: ಈ ಮೇಲ್ಕಂಡ ಕಾರಣಗಳಿಗಾಗಿ ಈ ಕೆಳಕಂಡಂತೆ ವಿಚಾರಣಾ ವರದಿ ಸಲ್ಲಿಸಲಾಗಿದೆ.

**: ವಿಚಾರಣಾ ವರದಿ :**

ಶಿಸ್ತು ಪ್ರಾಧಿಕಾರವು ಆಪಾದಿತ ಸರ್ಕಾರಿ ನೌಕರ **ಶ್ರೀ ರಂಗನಾಥ್,** ಸಹಾಯಕ ಕಾರ್ಯಪಾಲಕ ಅಭಿಯಂತರರು, ವಾರ್ಡ್ ನಂ. 141, ಚಾಮರಾಜಪೇಟೆ ಉಪ ವಿಭಾಗ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು ವಿರುದ್ಧದ ದೋಷಾರೋಪಣೆಯಲ್ಲಿ ಮಾಡಲಾದ ಆಪಾದನೆಗಳನ್ನು **ರುಜುವಾತು ಪಡಿಸುವಲ್ಲಿ ಸಫಲರಾಗಿರುತ್ತಾರೆ.**

ಈ ವರದಿಯನ್ನು ಮಾನ್ಯ ಉಪಲೋಕಾಯುಕ್ತ–1 ರವರಿಗೆ ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸುವಂತೆ ಕಛೇರಿಗೆ ಆದೇಶಿಸಲಾಗಿದೆ.

**21ನೇ ಮಾರ್ಚ್ 2022.**

21/3/22

(ಜಿ. ನಂಜುಂಡಯ್ಯ)
ಅಪರ ನಿಬಂಧಕರು ವಿಚಾರಣೆಗಳು–10,
ಕರ್ನಾಟಕ ಲೋಕಾಯುಕ್ತ,
ಬೆಂಗಳೂರು.

| | |
|---|---|
| **LIST OF WITNESS EXAMINED ON BEHALF OF DISCIPLINARY AUTHORITY :** | |
| PW-1 : Sri. Sarver Baig (complainant) (original) | |
| **LIST OF EXHIBITS MARKED ON BEHALF OF DISCIPLINARY AUTHORITY:** | |
| Ex.P.1: | Complaint of the complainant dated 17/11/2014 (original) |
| Ex.P.2 : | Form No. I (complaint) dt. 17/11/2014 (original) |
| Ex.P.3 : | Form No. II (Affidavit) dt. 17/11/2014 (original) |
| Ex.P.4 : | Copies of notice issued by AEE, BBMP U/s 321 (1) of KMC Act, dated 28/11/2013. (Xerox) |
| Ex.P.5 : | Copies of notice issued by AEE, BBMP U/s 321 (2) of KMC Act, dated 28/11/2013. (Xerox) |
| Ex.P.6 : | Copies of notice issued by EE, BBMP U/s 462 of KMC Act, dated 23/06/2014. ( Xerox) |

| | |
|---|---|
| Ex.P.7 : | Copy of plaint OS 394/2014 (Xerox) |

DOR of DGO : **30.11.2018 (Already Retired).**

**21st March 2022.**

**( G. NANJUNDAIAH )**
Additional Registrar (Enquiries)-10
Karnataka Lokayukta,
Bengaluru.

**GOVERNMENT OF KARNATAKA**

**KARNATAKA LOKAYUKTA**

No.UPLOK-1/DE/40/2017/ARE-10

Multi Storied Building,
Dr. B.R. Ambedkar Veedhi,
Bengaluru-560 001
Date: **22/03/2022**

**RECOMMENDATION**

Sub:- Departmental inquiry against;
Sri Ranaganth, Assistant Executive Engineer, Bruhat Bengaluru Mahanagara Palike Ward No.141, Chamarajapet Sub Division, Bengaluru – Reg.

Ref:- 1) Govt. Order No. ನಅಇ 720 ಎಂಎನ್‌ಯು 2016, Bengaluru dated 31/12/2016.

2) Nomination order No.UPLOK-1/DE/40/2017, Bengaluru dated 11/1/2017 of Upalokayukta-1, State of Karnataka, Bengaluru

3) Inquiry Report dated 22/3/2022 of Additional Registrar of Enquiries-10, Karnataka Lokayukta, Bengaluru.

----

The Government by its order dated 31/12/2016 initiated the disciplinary proceedings against Sri Ranganath, Assistant Executive Engineer, Bruhat Bengaluru Mahanagara Palike, Ward No.141, Chamarajapet Sub Division, Bengaluru (hereinafter referred to as Delinquent Government Official, for short as DGO) and entrusted the Departmental Inquiry to this Institution.

2. This Institution by Nomination Order No.UPLOK-1/DE/40/2017 Bengaluru dated 11/1/2017 nominated Additional Registrar of Enquiries-10, Karnataka Lokayukta, Bengaluru, as the Inquiry Officer to frame charges and to conduct Departmental Inquiry against DGO for the alleged charge of misconduct, said to have been committed by him.

3. The charge framed against DGO Sri Ranganath, Assistant Executive Engineer, Bruhat Bengaluru Mahanagara Palike, Ward No.141, Chamarajapet Sub Division, Bengaluru was to the effect that in respect of the unauthorised construction of building on property bearing No.22, 1st Main Road, 10th Road, Ward No.141, Chamarajpet Sub Division, the DGO had issued Provisional order dated 28/11/2013 and Confirmation order on 6/1/2014. The Executive Engineer has passed order under Section 462 of Karnataka Municipal Corporations Act on 23/6/2014. Though the provisional order was issued on 28/11/2013 no action was taken by the DGO till 6/1/2014 and the DGO has allowed time to the owner of the property to approach the Court without taking action on Confirmation order. He has submitted the file to the Executive Engineer for issuing order u/s. 462 of Karnataka Municipal Corporations Act on 23/6/2014. Thus, there was delay on the part of DGO in taking action against the owner of the property after issuing the provisional order, which amounts to dereliction of duty on the part of DGO.

4. The Inquiry Officer (Additional Registrar of Enquiries-10) on proper appreciation of oral and documentary evidence has held that the Disciplinary Authority has proved the above charge against DGO Sri Ranganath, Assistant Executive Engineer, Bruhat Bengaluru Mahanagara Palike, Ward No.141, Chamarajapet Sub Division, Bengaluru.

5. On re-consideration of inquiry report and taking note of the totality of the circumstances of the case, I do not find any reason to interfere with the findings recorded by the Inquiry Officer. It is

hereby recommended to the Government to accept the report of Inquiry Officer.

6. As per the First Oral Statement submitted by DGO, he has retired from service on 30/11/2018 (during the pendency of inquiry).

7. Having regard to the nature of charge proved against DGO Sri Ranganath, Assistant Executive Engineer, Bruhat Bengaluru Mahanagara Palike, Ward No.141, Chamarajapet Sub Division, Bengaluru, it is hereby recommended to the Government for imposing penalty of withholding 10% of pension payable to DGO Sri Ranganath for a period of 5 years.

8. Action taken in the matter shall be intimated to this Authority.

Connected records are enclosed herewith.

22/3/22

**(JUSTICE B.S.PATIL)**
Upalokayukta,
State of Karnataka,
Bengaluru